(ಗೊಂದಲ)

ಉಪಾಧ್ಯಕ್ಷಣಿಯವರು : ತಾವು ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ.

(ಗೊಂದಲ)

ಉಪಾಧ್ಯಕ್ಷಣಿಯವರು : ಇದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ಯಡಿಯೂರಪ್ಪನವರೇ ತಾವು ಹಿರಿಯ ಸದಸ್ಯರು, ಈಗ ತಾವು ಈತರದ ಬೇರೆ ಕಡೆಯಿಂದ ಮಾತನಾಡುವುದು ಸರಿಯಲ್ಲ ತಮ್ಮ ಜಾಗಕ್ಕೆ ಹೋಗಿ ಮಾತನಾಡಬೇಕು.

(ಬಿ.ಎಸ್. ಯಡಿಯೂರಪ್ಪನವರು ಹಾಗೂ ಇತರ ಬಿಜೆಪಿ ಸದಸ್ಯರು ಜೋರಾಗಿ ಮಾತನಾಡುತ್ತಾ ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷಣಿಯವರು : ಈಗೇನು ಅವರು ಮಾತನಾಡುತ್ತಿದ್ದಾರೆ ಅವರು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

6.55 ಪಿ.ಎಂ.

ಉಪಾಧ್ಯಕ್ಷಣಿಯವರು : ಮಾನ್ಯ ಚಿಕ್ಕೇಗೌಡರೇ ತಾವು ದಯವಿಟ್ಟು ಕುಳಿತುಕೊಳ್ಳಿ.

ಮಂತ್ರಿಗಳ ಹೇಳಿಕೆ

ತುಂಗಭದ್ರಾ ಎಡದಂಡೆ ನಾಲಾದಿಂದ 1-4-91ರಿಂದ ನೀರು ಹಾಯಿಸುವ ಬಗ್ಗೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ತುಂಗಭದ್ರಾ ಎಡದಂಡೆ ನಾಲಾದಲ್ಲಿ ನೀರುಹಾಯಿಸುವುದನ್ನು ದಿನಾಂಕ 1.4.91ರಿಂದ ಮುಂದುವರಿಸಿ, ಹಾಲಿ ಬೆಳೆದು ನಿಂತಿರುವ ಪೈರುಗಳಿಗೆ ನೀರು ಒದಗಿಸುವ ಬಗ್ಗೆ ವಿರೋಧ ಪಕ್ಷದ ನಾಯಕರಾದ ಶ್ರೀ ಡಿ.ಬಿ. ಚಂದ್ರೇಗೌಡರು ಮತ್ತಿತರರು ಪ್ರಸ್ತಾಪಿಸಿರುತ್ತಾದರೆ. ಈ ಬಗ್ಗೆ ರಾಜ್ಯದ ಉಚ್ಚನ್ಯಾಯಾಲಯದಲ್ಲಿ ಈ ನಾಲೆಯ ಕೆಳಗಿನ ಕೆಲವು ರೈತರುಗಳ ಅರ್ಜಿಯನ್ನು ಪರಿಶೀಲಿಸಿ, ಜಲಾಶಯದ ಮಟ್ಟ 1578.90 ಅಡಿಗಳವರೆಗೆ ಹಿಂದಿನ ಸಾಲಿನಲ್ಲಿ ಅಂದರೆ ದಿನಾಂಕ 13.4.90ರವರೆಗೆ ಈ ನಾಲೆಯಲ್ಲಿ ನೀರನ್ನು ಹಾಯಿಸಲಾಗಿದ್ದು ಪ್ರಸ್ತುತ ಸಾಲಿನಲ್ಲಿಯೂ ಈ ಮಟ್ಟ ತಲುಪುವವರೆಗೆ ನೀರನ್ನು ಹಾಯಿಸಬೇಕೆಂದು ಉಚ್ಚನ್ಯಾಯಾಲಯವು ದಿನಾಂಕ 15.3.91ರಂದು ತೀರ್ಪು ನೀಡಿದೆ. ದಿನಾಂಕ 1.4.91ರಂದು ತುಂಗಭದ್ರಾ ಜಲಾಶಯದ ನೀರನ ಮಟ್ಟ 1578.90 ಅಡಿಗಳನ್ನು ತಲುಪುವ ಪರಿಸ್ಥಿತಿ ಇದ್ದು, ಈ ದಿನಾಂಕದ ನಂತರವೂ ನೀರನ್ನು ಹಾಯಿಸುವುದನ್ನು ಮುಂದುವರಿಸಿದಲ್ಲಿ ಉಚ್ಚನ್ಯಾಯಾಲದ ತೀರ್ಪಿಗೆ ವಿರುದ್ಧವಾಗಿ ಕ್ರಮ ಕೈಗೊಂಡಂತಾಗುವುದು. ಈ ಕಾರಣದಿಂದ ದಿನಾಂಕ 1.4.91 ರಿಂದ ಮುಂದಕ್ಕೆ ತುಂಗಭದ್ರಾ ಎಡದಂಡೆ ನಾಲೆಯಲ್ಲಿ 36ನೇ ಮೈಲಿಯ ನಿಯಂತ್ರಣ ಗೇಟನ್ನು ಮುಚ್ಚಬೇಕಾಗಿರುತ್ತದೆ.

ಶ್ರೀ ಸಿ. ಬೈರೇಗೌಡ : ಯಾವ ಯಾವ ತಾಲ್ಲೂಕಿಗೆ ಎಷ್ಟು ಹಣ ಬಿಡುಗಡೆ ಈ ಕುಡಿಯುವ ನೀರನ ಬಗ್ಗೆ ಮಾಡಲಾಗಿದೆ ಎಂಬುದರ ಬಗ್ಗೆ ಒಂದು ಹೇಳಿಕೆ ಕೊಡುತ್ತೇವೆಂದು ಮಂತ್ರಿಗಳು ಹೇಳಿದ್ದರು.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಕೇಳಿದ್ದುದು, ನೀರು ನಿಲ್ಲಿಸಿ ಎಂದು ಹೇಳಿದ್ದಲ್ಲ ಸಾವಿರಾರು ಎಕರೆ ಜಮೀನಿಗೆ ನೀರು ಕೊಡಿ ಎಂದು ನಾವು ಒತ್ತಾಯ ಮಾಡಿದರೆ ನೀವು ನಿಲ್ಲಿಸುತ್ತೇವೆಂದು ಹೇಳುತ್ತಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಏನಾಗಿದೆ, ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಒಂದು ತೀರ್ಪು ಕೊಟ್ಟಿದ್ದಾರೆ. ಅದರಲ್ಲಿ ರೈತರ ಅರ್ಜಿಗಳನ್ನೆಲ್ಲಾ ನೋಡಿ ಜಲಾಶಯದ ನೀರಿನ ಮಟ್ಟ 1578.90 ಅಡಿಗಳವರೆಗೆ ಹಿಂದಿನ ಸಾಲಿನಲ್ಲಿ ಬಂದರೆ, ಮತ್ತು ಆ ಮಟ್ಟ ತಲುಪುವವರೆಗೆ ಮಾತ್ರ ನೀರು ಹಾಯಿಸಬೇಕೆಂದು